**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಜಯ ಕುಮಾರ |
| ತಂದೆಯ ಹೆಸರು | : | ಪ್ರತಾಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವಕೀಲರು |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 11

ದಿ: 17-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಕಳೆದ ಎರಡು ವರ್ಷಗಳ ಹಿಂದೆ ನಾನು ದಾವಣಗೆರೆಯಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಚಾಸಾ-1 ರವರ ಪರಿಚಯ ಇದೆ. ನನಗೆ ಚಾಸಾ-12 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಗಲಾಟೆ ಆದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈಗ ತೋರಿಸಿದ ಮುಚ್ಚಳಿಕೆ ಪತ್ರದಲ್ಲಿ ನನ್ನ ಇರುತ್ತದೆ. ಸದರಿ ಮುಚ್ಚಳಿಕೆ ಪತ್ರವನ್ನು ನಿಪಿ-5 ಅಂತ, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಅಂತ ಗುರುತಿಸಲಾಯಿತು. ಆ ಸಹಿಯನ್ನು ನಾನು ದಾವಣಗೆರೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಚಾಸಾ-1 ರವರು ನನಗೆ ಕರೆಸಿದ್ದರು ಆಗ ನಾನು ಸಹಿ ಮಾಡಿದ್ದೇನೆ. ಗಲಾಟೆ ಆಗಿದೆ ಅಂತ ಚಾಸಾ-1 ರವರು ಹೇಳಿದರು, ಪೊಲೀಸರು ಕೇಳಿದಾಗ ಸಹಿ ಮಾಡಬೇಕಾಗುತ್ತದೆ ಅಂತ

ತಿಳಿಸಿದರು. ನಿಪಿ-5 ರ ದಾಖಲೆಯಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ಘಟನೆಯಾಗುವ ಕಾಲಕ್ಕೆ ನಾನು ಇನ್ನೂ ವಕೀಲರು ಆಗಿರಲಿಲ್ಲ, ವಿದ್ಯಾಭ್ಯಾಸ ಮಾಡುತ್ತಿದ್ದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ, ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

2. ಘಟನೆಯಾಗಿದೆ ಅಂತ ಹೇಳುವ ಕಾಲಕ್ಕೆ ನಾನು ಎಲ್.ಎಲ್. ಬಿ. ವಿದ್ಯಾಭ್ಯಾಸ ಮಾಡುತ್ತಿದ್ದೆ. ದಿಃ 21-09-2022 ರಂದು ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾ ಗಣಪತಿ ಕೂಡಿಸಿದ್ದರು ಅಂದರೆ ನಿಜ. ಆ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುತ್ತವೆ ಅಂದರೆ ನಿಜ. ನಾನು ಮತ್ತು ಚಾಸಾ-12 ರವರು ಆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗಿದ್ದೆವು ಅಂದರೆ ಸರಿಯಲ್ಲ. ಚಾಸಾ-12 ರವರು ಸಹ ವಕೀಲರ ವೃತ್ತಿ ಮಾಡಿಕೊಂಡಿದ್ದಾರೆ ಅಂದರೆ ಅವರ ಹೆಸರು ಕೇಳಿದ್ದೇನೆ ಆದರೆ ಪರಿಚಯ ಇಲ್ಲ.

3. ಆ ಹೈಸ್ಕೂಲ್ ಮೈದಾನದಲ್ಲಿ ಕಾರ್ಯಕ್ರಮ ನಿಮಿತ್ಯ, ಚಾಸಾ-1 ರವರು ತಳ್ಳು ಗಾಡಿಯಲ್ಲಿ ಗೋಬಿ ಮತ್ತು ದೋಸೆ ಮಾಡುತ್ತಿದ್ದರು ಮತ್ತು ಆ ಸಂದರ್ಭದಲ್ಲಿ ನಾನು ಮತ್ತು ಚಾಸಾ-12 ರವರು ಚಾಸಾ-1 ರವರ ತಳ್ಳು ಗಾಡಿಯಲ್ಲಿ ದೋಸೆ ತಿಂದು ಬರಬೇಕು ಅಂತ ಹೋಗಿದ್ದೆವು ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಚಾಸಾ-1 ಮತ್ತು 9 ರವರಿಗೆ ಬಾಯಿಗೆ ಬಂದಂತೆ ಬೈದಾಡಿ ಅವಾಚ್ಯ ಶಬ್ದಗಳಿಂದ ಬೈದು ಗಾಡಿಯನ್ನು ಇಡಬಾರದು ಅಂತ ಹೇಳುತ್ತಿದ್ದರು ಅಂದರೆ ಸರಿಯಲ್ಲ. ಆಗ ಸಂಜೆ 5.30 ಗಂಟೆ ಆಗಿತ್ತು ಅಂದರೆ ಸರಿಯಲ್ಲ. ಚಾಸಾ-1 ರವರು ಅದಕ್ಕೆ ಆರೋಪಿಗೆ ಈ

ರೀತಿ ಬೈಯಬೇಡ ತಮ್ಮ ತಮ್ಮ ವ್ಯಾಪಾರ ಮಾಡಿಕೊಂಡು ಹೋಗುವುದಾಗಿ ಹೇಳಿದರು ಅಂದರೆ ಸರಿಯಲ್ಲ. ಆಗ ಆರೋಪಿಯು ಗತಿ ಕಾಣಿಸುತ್ತೇನೆ ಅಂತ ಹೇಳಿ ತನ್ನ ತಳ್ಳೋ ಗಾಡಿಯಿಂದ ಮು.ಮಾ.3 ರ ಚಾಕುವಿನಿಂದ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಹೊಟ್ಟೆಗೆ ಹಾಕಲು ಹೋದಾಗ ಆಗ ಅವರ ಎಡಭುಜಕ್ಕೆ ತಾಗಿ ಗಾಯವಾಯಿತು ಅಂದರೆ ಸರಿಯಲ್ಲ. ಆ ಚಾಕು ನ್ಯಾಯಾಲಯದ ಮುಂದೆ ಇರುವ ಮು.ಮಾ.3 ಅಂದರೆ ಸರಿಯಲ್ಲ. ನಾನು ಮತ್ತು ಇತರರು ಸೇರಿ ಈ ಜಗಳವನ್ನು ಬಿಡಿಸಿರುತ್ತೇವೆ ಅಂದರೆ ಸರಿಯಲ್ಲ. ಆಗ ನ್ಯಾಯಾಲಯ ಮುಂದೆ ಇರುವ ಆರೋಪಿಯ ಸಂಬಂಧಿಕರು ಧನಂಜಯ್ಯ ಮತ್ತು ದೇವೇಂದ್ರ ನಾಯ್ಕರವರು ಚಾಸಾ-1 ರವರನ್ನು ಹಿಡಿದುಕೊಂಡಿದ್ದರು ಅಂದರೆ ಸರಿಯಲ್ಲ. ನಾವೆಲ್ಲರೂ ಬಂದಿದ್ದನ್ನು ನೋಡಿ ಆರೋಪಿಯು ಚಾಕುವನ್ನು ಅಲ್ಲೇ ಬಿಸಾಕಿ, ಇವತ್ತು ಉಳಿದುಕೊಂಡಿದ್ದೀರಾ ಅಂತ ಜೀವ ಬೆದರಿಕೆ ಹಾಕಿದರು ಅಂದರೆ ಸರಿಯಲ್ಲ.

4. ನಂತರ ಚಾಸಾ-1 ರವರಿಗೆ ಆಗಿದ್ದರಿಂದ ಚಿಕಿತ್ಸೆ ಕೊಡಿಸಲು ಅವರನ್ನು ಚಾಸಾ-9 ಮತ್ತು 10 ರವರು ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡಿದ್ದರು ಅಂದರೆ ಸರಿಯಲ್ಲ. ಚಾಸಾ-1 ರವರು ಚಿಕಿತ್ಸೆ ಪಡೆದು, ನಂತರ ದೂರು ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ದಿಃ 23-09-2022 ರಂದು ನಾನು ತನಿಖಾಧಿಕಾರಿಗಳ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಅಂತ ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಸಾಕ್ಷಿ ಕೊಡುತ್ತೇನೆ ಅಂತ ಹೇಳಿ ನಿಪಿ-5 ರಂತೆ ಮುಚ್ಚಳಿಕೆ ಪತ್ರ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಮುಚ್ಚಳಿಕೆ ಪತ್ರದಲ್ಲಿ ಸಾಕ್ಷಿಯನ್ನು ನುಡಿಯಲು ತಪ್ಪಿದ್ದಲ್ಲಿ ನ್ಯಾಯಾಲಯವು ವಿಧಿಸುವಂತಹ ಮೊಬಲಗಗಳನ್ನು ಸರ್ಕಾರಕ್ಕೆ ಕೊಡಲು ಬದ್ದನಾಗಿರುತ್ತೇನೆ ಅಂತ ಮುಚ್ಚಳಿಕೆ ಪತ್ರ ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಅಂತ ನುಡಿದಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.